# ಪ್ರಧಾನಿಯ ಪೀನಟ್



■ ಪ್ರವೀಣ ಕುಲಕರ್ಣಿ

ಅದು ಗ್ರೀಕ್ ದೇಶದ ಪ್ರಧಾನಿಯ ಪತ್ರಿಕಾಗೋಷ್ಠಿ. ಘನಗಂಭೀರವಾಗಿ ನಡೆಯುತ್ತಿದ್ದ ಆ ಪತ್ರಿಕಾಗೋಷ್ಠಿಗೆ ನುಗ್ಗಿ, ಅಡೆತಡೆ ಉಂಟು ಮಾಡಿದ 'ಆರೋಪಿ'ಯನ್ನು ಪ್ರಧಾನಿ ಕೈರಿಯಾಕೊಸ್ ಮಿಟ್ಸೊಟೇಕಿಸ್ ಎತ್ತಿ ಮುದ್ದಾಡಿದ್ದರು! ಏಕೆಂದರೆ, ತಾವು ಅತ್ಯಂತ ಪ್ರೀತಿಯಿಂದ ದತ್ತು ಪಡೆದ ಬೀದಿನಾಯಿಯೇ ಆ ಆರೋಪಿ!

2021ರಲ್ಲಿ ಕೈರಿಯಾಕೊಸ್ ಅವರು ಈ ನಾಯಿಯನ್ನು ದತ್ತು ಪಡೆದ ಮೇಲೆ ಗ್ರೀಕ್ ದೇಶದಲ್ಲಿ ಮಾತ್ರವಲ್ಲ; ಜಗತ್ತಿನ ಹಲವು ದೇಶಗಳಲ್ಲೂ ಅದು ಜನಪ್ರಿಯವಾಗಿದೆ. ಅದಕ್ಕೆ ಪೀನಟ್ ಎಂದು ನಾಮಕರಣ ಮಾಡಲಾಗಿದೆ. ಪೀನಟ್ ಈಗ ಗ್ರೀಕ್‌ನ 'ಪ್ರಥಮ ನಾಯಿ'ಯಾಗಿದ್ದು, ಈ ದೇಶಕ್ಕೆ ಪ್ರವಾಸ ಕೈಗೊಳ್ಳುವ ಬಹುತೇಕ ಜಾಗತಿಕ ನಾಯಕರನ್ನು ಅದು ಭೇಟಿ ಮಾಡಿದೆ.

ಬಂಗಾರ ಬಣ್ಣದ, ಕಪ್ಪು ಮೂತಿಯ ಈ ನಾಯಿ, ಕೈರಿಯಾಕೊಸ್ ಅವರು ಒಮ್ಮೆ ಸ್ಲೊವಾಕಿಯಾದ ಪ್ರಧಾನಿ ಜತೆ ಪತ್ರಿಕಾಗೋಷ್ಠಿ ನಡೆಸುತ್ತಿದ್ದಾಗ, ಸಭಾಂಗಣಕ್ಕೆ ಪ್ರವೇಶಿಸಿತು. ಜೋರಾಗಿ ಬೊಗಳಿ ಮಾಧ್ಯಮ ಪ್ರತಿನಿಧಿಗಳ ಗಮನವನ್ನು ತನ್ನತ್ತ ಸೆಳೆಯಿತು. 'ನಾನು ದತ್ತು ಪಡೆದ ಬೀದಿನಾಯಿ ಅದು. ಸಾಮಾನ್ಯವಾಗಿ ಸುಮ್ಮನಿರುವ ಅದು, ಎಂದಿಗೂ ಹೀಗೆ ಗಲಾಟೆ ಮಾಡಿದ್ದಿಲ್ಲ. ಬಾಗಿಲಲ್ಲಿ ಅತಿಥಿಗಳಿಗೆ ಅಭಿನಂದಿಸಿ, ಆದರದಿಂದ ಬರಮಾಡಿಕೊಂಡು ಹೊರಟುಬಿಡುವುದು ಅದರ ರೂಢಿ. ಇಂದು ಏಕೋ ಗಲಾಟೆ ಮಾಡುತ್ತಿದೆ' ಎಂದು ಕೈರಿಯಾಕೊಸ್ ಅದನ್ನು ಎತ್ತಿಕೊಂಡಿದ್ದರು. 'ವಿಶ್ವ ಬೀದಿ ಪ್ರಾಣಿಗಳ ದಿನ'ವೇ ಪ್ರಧಾನಿ ಈ ನಾಯಿಯನ್ನು ದತ್ತು ಪಡೆದಿದ್ದರು. ಪ್ರಧಾನಿಯವರ ಮಾಕ್ಸಿಮೋಸ್ ಮ್ಯಾನ್ಷನ್‌ನಲ್ಲಿ ಕೋಣೆಯಿಂದ ಕೋಣೆಗೆ ಸುತ್ತು ಹೊಡೆಯುವ ಈ ನಾಯಿ, ಸಾಮಾನ್ಯವಾಗಿ ನೀಲಿಬಣ್ಣದ ಪಟ್ಟಿಯನ್ನು ಕೊರಳಲ್ಲಿ ಹೊಂದಿರುತ್ತದೆ. ಪ್ರಧಾನಿ ನಿವಾಸದ ಎಲ್ಲ ಸಿಬ್ಬಂದಿಯ ಮನವನ್ನೂ ಅದು ಗೆದ್ದಿದೆ. ಎಲ್ಲರೊಂದಿಗೂ ಸ್ನೇಹದಿಂದ ನಡೆದುಕೊಳ್ಳುವುದು ಅದರ ಗುಣವಾಗಿದೆ.

ಗ್ರೀಕ್‌ನಲ್ಲಿ ಈಗ ಪ್ರಾಣಿದಯಾ ಆಂದೋಲನವೊಂದು ಸದ್ದಿಲ್ಲದೆ ನಡೆಯುತ್ತಿದೆ. ಪ್ರಾಣಿಗಳನ್ನು ಹಿಂಸಿಸಿದರೆ ಹತ್ತು ವರ್ಷಗಳ ಜೈಲು ಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸುವ ಕಾಯ್ದೆಯನ್ನೂ ಇತ್ತೀಚೆಗೆ ಅಲ್ಲಿ ರೂಪಿಸಲಾಗಿದೆ. ಗ್ರೀಕ್‌ನ ಅಧ್ಯಕ್ಷರು ಬೆಕ್ಕೊಂದನ್ನು ದತ್ತು ಪಡೆದಿದ್ದರು. ಅಧ್ಯಕ್ಷರ ಬೆಕ್ಕು ಮತ್ತು ಪ್ರಧಾನಿಯವರ ನಾಯಿ ಜತೆಯಾಗಿ ಚಿತ್ರಕ್ಕೆ ಪೋಸು ನೀಡಿದ್ದವು. ದೇಶದಲ್ಲಿ ಬೀದಿ ಪ್ರಾಣಿಗಳು ಸೇಫ್ ಎಂಬ ಸಂದೇಶವನ್ನೂ ರವಾನಿಸಿದ್ದವು.

'ಪ್ರಾಣಿಗಳ ಕಲ್ಯಾಣ ಸಂಘದ ಆಹ್ವಾನದ ಮೇರೆಗೆ ನಾನು ಕಾರ್ಯಕ್ರಮವೊಂದಕ್ಕೆ ತೆರಳಿದ್ದೆ. ಅಲ್ಲಿ ಪೀನಟ್ ನನ್ನನ್ನು ಆಯ್ಕೆ ಮಾಡಿಕೊಂಡು ಜತೆಯಲ್ಲೇ ಬಂದುಬಿಟ್ಟಿತು' ಎಂದು ಅತ್ಯಂತ ಪ್ರೀತಿಯಿಂದ ಅಂದಿನ ಘಟನೆಯನ್ನು ನೆನೆಯುತ್ತಾರೆ ಕೈರಿಯಾಕೊಸ್.

ಗ್ರೀಕ್‌ನಲ್ಲಿ ಕೋವಿಡ್‌ನಿಂದ ಉಂಟಾದ ಆರ್ಥಿಕ ಹಿಂಜರಿತವು ಪ್ರಾಣಿಗಳ ಮೇಲೂ ಪ್ರತಿಕೂಲ ಪರಿಣಾಮ ಬೀರಿತು ಎಂಬುದನ್ನು ನಾವೆಲ್ಲ ನಂಬಲೇಬೇಕು. ದೈನಂದಿನ ಬದುಕು ಸಾಗಿಸುವುದು ದುಸ್ತರವಾದ ಸಾವಿರಾರು ಮಂದಿ ತಮ್ಮ ಪ್ರೀತಿಯ ಸಾಕುಪ್ರಾಣಿಗಳನ್ನು ಬೀದಿಗೆ ತಂದುಬಿಟ್ಟರು. ಅವುಗಳಲ್ಲಿ ನಾಯಿ ಮತ್ತು ಬೆಕ್ಕುಗಳ ಸಂಖ್ಯೆಯೇ ಹೆಚ್ಚಾಗಿತ್ತು. ಗ್ರೀಕ್‌ನ ಪ್ರಮುಖ ನಗರಗಳ ಬೀದಿಗಳಲ್ಲಿ ನಾಯಿ–ಬೆಕ್ಕುಗಳ ಸಂಖ್ಯೆ ಹೆಚ್ಚಾಗಿತ್ತು. ಬೀದಿಯಲ್ಲಿ ಪ್ರಾಣಿಗಳ ನರಳಾಟ ಕಂಡ ಅಲ್ಲಿನ ಸಂಸದರು ಹೊಸ ಕಾಯ್ದೆ ರೂಪುಗೊಳ್ಳಲು ಕಾರಣರಾದರು. ಸಾಕು ಪ್ರಾಣಿಗಳನ್ನು ಮಾರುವವರು, ಕೊಳ್ಳುವವರು ಮತ್ತು ಮಾಲೀಕರಿಗೆ ಹೊಣೆ ನಿಗದಿ ಮಾಡಲಾಯಿತು. ಅವುಗಳ ಹಿಂಸೆಗೆ ಕಾರಣರಾದವರನ್ನು ಶಿಕ್ಷಿಸುವ ವ್ಯವಸ್ಥೆ ಜಾರಿಗೆ ಬಂತು. ಹಸಿವಿನಿಂದ ಮುಕ್ತವಾಗಿರುವ, ಅನಗತ್ಯ ಕಾಟದಿಂದ ಮುಕ್ತವಾಗಿರುವ, ಗಾಯ, ಅನಾರೋಗ್ಯಕ್ಕೆ ಚಿಕಿತ್ಸೆ ಪಡೆಯುವ, ಭಯಮುಕ್ತ ವಾತಾವರಣದಲ್ಲಿ ಬದುಕುವ ಹಕ್ಕನ್ನು ಅಲ್ಲಿನ ಕಾಯ್ದೆ ಬೀದಿ ಪ್ರಾಣಿಗಳಿಗೆ ಒದಗಿಸಿದೆ.

ಗ್ರೀಕ್ ಅಧ್ಯಕ್ಷ ಕೆತರಿನಾ ಸಾಕೆಲ್ಲರೊಪೌಲು ಅವರು ಬೆಕ್ಕಿನ ಮರಿಯನ್ನು ದತ್ತು ಪಡೆದು ಸಾಕಿದ್ದುದು ಕೈರಿಯಾಕೊಸ್ ಅವರಿಗೆ ನಾಯಿ ದತ್ತು ಪಡೆಯಲು ಪ್ರೇರಣೆಯಾಯಿತಂತೆ. ಎರಡನೇ ಜಾಗತಿಕ ಸಮರದ ಸ್ಮರಣೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ತೆರಳಿದ್ದಾಗ ಅಧ್ಯಕ್ಷರಿಗೆ ಈ ಬೆಕ್ಕಿನ ಮರಿ ಸಿಕ್ಕಿತ್ತಂತೆ. ಪೀನಟ್ ಮತ್ತು ಈ ಬೆಕ್ಕು ಎರಡೂ ಈಗ ಸ್ವಾತಂತ್ರ್ಯ ಅನುಭವಿಸುತ್ತಿರುವ ದೇಶದ ಬೀದಿ ಪ್ರಾಣಿಗಳ ಪ್ರತಿನಿಧಿಗಳಾಗಿ ಕಂಗೊಳಿಸುತ್ತಿವೆ.

ಕೈರಿಯಾಕೊಸ್ ಅವರ ಮನೆಗೆ ಯಾರೇ ಬರಲಿ, ಬಾಗಿಲಲ್ಲಿ ಬಾಲ ಅಲ್ಲಾಡಿಸುತ್ತಾ ನಿಂತು ಬರಮಾಡಿಕೊಳ್ಳುವ ಪೀನಟ್, ಬಳಿಕ ಗಣ್ಯರೊಂದಿಗೆ ನಿಂತು ಫೋಟೊಕ್ಕೆ ಪೋಸು ನೀಡುವುದನ್ನು ರೂಢಿ ಮಾಡಿಕೊಂಡಿದೆ. ಪ್ರತಿ ಸಲ ಗಣ್ಯ ಅತಿಥಿಗಳು ಬಂದಾಗ ಅವರ ಕಣ್ಮಣಿಯಾಗಿ ಕಂಗೊಳಿಸುತ್ತದೆ. ಕಳೆದ ವಾರ ಎಸ್ಟೊನಿಯಾ ಪ್ರಧಾನಿ ಕಾಲಾ ಕಲ್ಲಾಸ್ ಅವರು ಬಂದಾಗಲೂ ಎಲ್ಲೋ ದೂರದಲ್ಲಿದ್ದ ಪೀನಟ್, ಕ್ಯಾಮೆರಾಗಳನ್ನು ಕ್ಲಿಕ್ಕಿಸುವ ಸದ್ದು ಕೇಳಿ ಓಡೋಡಿ ಬಂದು ಮಧ್ಯ ನಿಂತುಕೊಂಡಿತು. ಯೂರೋಪಿನ ಬಹುತೇಕ ದೇಶಗಳ ನಾಯಕರಿಗೆ ಪರಿಚಿತವಾದ ನಾಯಿ ಇದಾಗಿದೆ. ಹಿಂದೊಮ್ಮೆ ಪತ್ರಿಕಾಗೋಷ್ಠಿಯಲ್ಲಿ ಗಲಾಟೆ ಮಾಡಿದ್ದು ಬಿಟ್ಟರೆ, ಮತ್ತೆ ಅಂತಹ ಸಾಹಸಕ್ಕೆ ಅದು ಕೈಹಾಕಿಲ್ಲ. ಪ್ರಧಾನಿ ನಿವಾಸಕ್ಕೆ ಬಂದವರಿಗೆಲ್ಲ ಬಾಲ ಅಲ್ಲಾಡಿಸುತ್ತಾ ಪ್ರೀತಿಯನ್ನು ಮಾತ್ರ ಮೊಗೆದು ಕೊಡುತ್ತಲೇ ಇದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65